ಕಠಿಣವಾದಂಥ ಶಿಕ್ಷೆಯಾಗಲೇಬೇಕು, ಈ ಕಠಿಣ ಶಿಕ್ಷೆಯನ್ನು ಕೊಡುವುದಕ್ಕೆ ಏನೇನು ಕಾನೂನುಗಳನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಾಗುತ್ತದೋ, ಇದಕ್ಕಾಗಿ ಕೋರ್ಟ್‌ಗಳಲ್ಲಿ ಏನೇನು ಬದಲಾವಣೆಗಳನ್ನು ತರುವುದಕ್ಕೆ ಸಾಧ್ಯವಾಗುತ್ತದೆ, ಇವೆಲ್ಲವನ್ನೂ ಕೂಡ ಮಾಡುವುದಕ್ಕೆ ನಮ್ಮ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ದತ್ತಾರವರು, ರೆಕ್ಸ್ ಥಿಯೇಟರ್‌ನಲ್ಲಿ Hate Story–2 ಎನ್ನುವ ಚಿತ್ರ ನಡೆಯುತ್ತಿದೆಯೆಂದು ಹೇಳಿದರು. ಈ ಸಿನಿಮಾದಲ್ಲಿ ಇಂಥದ್ದೆಲ್ಲ ಇದೆಯೆನ್ನುವುದನ್ನು ಹೇಳಿದರು. ನಾನು ಪೊಲೀಸ್ ಕಮಿಷನರ್‌ರವರಿಗೆ ಹೇಳಿ inspection ಮಾಡಿಸಿ ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೋ ಆ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಇಲ್ಲಿಗೆ ಚರ್ಚೆಯ ಮೇಲಿನ ಉತ್ತರ ಮತ್ತು ಸ್ಪಷ್ಟೀಕರಣ ಮುಕ್ತಾಯವಾಯಿತು. ಈಗ ಕಾವೇರಿ ಕಣಿವೆ ಜಲಾಶಯಗಳಿಂದ ನೀರಿನ ಹೊರಹರಿವಿನ ಬಗ್ಗೆ ಜಲ ಸಂಪನ್ಮೂಲ ಸಚಿವರು ಹೇಳಿಕೆ ಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ,

ಕಾವೇರಿ ನ್ಯಾಯಮಂಡಳಿಯ ದಿನಾಂಕ: 05–02–2007ರ ಆದೇಶದಲ್ಲಿ ಕರ್ನಾಟಕ ರಾಜ್ಯವು ಸಾಮಾನ್ಯ ಜಲವರ್ಷದ ಜೂನ್ ತಿಂಗಳಲ್ಲಿ 10 ಟಿಎಂಸಿ ಮತ್ತು ಜುಲೈ ತಿಂಗಳಲ್ಲಿ 34 ಟಿಎಂಸಿ ಹಾಗೂ ಆಗಸ್ಟ್ ಮಾಹೆಯಲ್ಲಿ 50 ಟಿ.ಎಂ.ಸಿ ಪ್ರಮಾಣದ ನೀರನ್ನು ಬಿಡುಗಡೆ ಮಾಡಲು ಸೂಚಿಸಲಾಗಿದೆ. ಕರ್ನಾಟಕದ ಜಲಾಶಯಗಳಲ್ಲಿ ಕಳೆದ 40 ವರ್ಷಗಳ ಸರಾಸರಿ ಒಳಹರಿವಿನ ಪ್ರಮಾಣಕ್ಕೆ ಎದುರಾಗಿ ದಿನಾಂಕ:16–07–2014 ರಂದು ಒಳಹರಿವಿನ ಪ್ರಮಾಣದಲ್ಲಿ 52% ಕೊರತೆ ಇರುತ್ತದೆ. ದಿನಾಂಕ:16–07–2014

ರಂತೆ ಬಿಳಿಗುಂಡ್ಲುವಿನಲ್ಲಿ Recorded Flows ಪ್ರಮಾಣವು ಸರಾಸರಿಗಿಂತ 45.29% ಕಡಿಮೆ ಇರುತ್ತದೆ. ಕಾವೇರಿ ನ್ಯಾಯಮಂಡಳಿಯ ಅಂತಿಮ ಆದೇಶದ ಪ್ರಕಾರ ಸಾಮಾನ್ಯ ಜಲವರ್ಷದಲ್ಲಿ ದಿನಾಂಕ:16–07–2014 ರಂದು ಬಿಳಿಗುಂಡ್ಲುವಿನಲ್ಲಿ 27.55 ಟಿ.ಎಂ.ಸಿ ಪ್ರಮಾಣವನ್ನು ಖಚಿತಪಡಿಸಬೇಕಾಗಿರುತ್ತದೆ. ಈ ವರ್ಷದಲ್ಲಿ ನೀರಿನ ಕೊರತೆಯಿರುವ ಹಿನ್ನೆಲೆಯಲ್ಲಿ ನ್ಯಾಯಮಂಡಳಿಯ ದಿನಾಂಕ:05–02–2007 ರ ಅಂತಿಮ ಆದೇಶದ ಕಂಡಿಕೆ–VIIರಲ್ಲಿ Distress sharing ಗೆ ಅವಕಾಶವಿದ್ದು, ಅದರಲ್ಲಿ ಈ ಕೆಳಕಂಡತೆ ತಿಳಿಸಲಾಗಿದೆ.

> "In case the yield of Cauvery Basin is less in a distress year, the allocated shares shall be proportionately reduced among the states of Kerala, Karnataka, Tamil Nadu and Union Territory of Pondicherry."

ಸದರಿ ಕಂಡಿಕೆಯನುಸಾರ ನೀರಿನ ಕೊರತೆ ಇರುವ ಜಲ ವರ್ಷಗಳಲ್ಲಿ ರಾಜ್ಯಗಳಿಗೆ ಹಂಚಿಕೆಯಾಗಿರುವ ನೀರಿನ ಪ್ರಮಾಣವನ್ನು ಪ್ರಮಾಣಾನುಗತವಾಗಿ (proportionately) ಹಂಚಿಕೊಳ್ಳುವುದು ಅನಿವಾರ್ಯವಾಗಿದೆ.

ಅಲ್ಲದೇ, ಜಲಾನಯನ ಕೆಳ ಭಾಗದ ನದಿ ಪಾತ್ರದ Ecology ಮತ್ತು Flora & Fauna ಇವುಗಳನ್ನು ಸಂರಕ್ಷಿಸಲು ಹಾಗೂ ಗ್ರಾಮಗಳು, ಪಟ್ಟಣಗಳಿಗೆ ಹಾಗೂ ನಗರಗಳಿಗೆ ಕುಡಿಯುವ ನೀರನ್ನು ಒದಗಿಸಬೇಕಾಗಿರುತ್ತದೆ. ಹಾಗೆಯೇ, ಕೆ.ಆರ್.ಎಸ್ ಕೆಳಭಾಗದ ದೇವರಾಯ, ಚಿಕ್ಕದೇವರಾಯ ಸಾಗರ, ವಿರಿಜಾ ಮತ್ತು ರಾಮಸ್ವಾಮಿ ಅಣೆಕಟ್ಟು ನಾಲೆಗಳಲ್ಲಿನ ನಿಂತ ಬೆಳೆಗೆ ನೀರಿನ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಕೆ.ಆರ್.ಎಸ್ ಹಾಗೂ ಕಬಿನಿ ಜಲಾಶಯದಿಂದ ನೀರಿನ ಹೊರ ಹರಿವನ್ನು ನಿಯಂತ್ರಿಸಲಾಗುತ್ತಿದೆ.

ದಿನಾಂಕ:06–06–2014 ರಂದು ನಡೆದ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆಯಲ್ಲಿ ಹುಲಿಕೆರೆ ಸುರಂಗವನ್ನು ದುರಸ್ಥಿಗೊಳಿಸುವ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿದ್ದು, ಹಾನಿಯಾಗಿರುವ 125 ಮೀ. ಉದ್ದದ

ಸುರಂಗವನ್ನು ಜುಲೈ 2014ರ ಅಂತ್ಯದೊಳಗೆ ಪೂರ್ಣಗೊಳಿಸಿ, ಕೆ.ಆರ್.ಎಸ್. ಜಲಾಶಯದ ನೀರಿನ ಲಭ್ಯತೆಯ ಮೇರೆಗೆ ಆಗಸ್ಟ್ ಮೊದಲ ವಾರದಲ್ಲಿ ನಾಲೆಗಳಲ್ಲಿ ನೀರು ಹರಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ. ಸದರಿ ನಿರ್ಣಯದಂತೆ ಕಾಲುವೆಯಲ್ಲಿ ನೀರು ಹರಿಸಲು ಉದ್ದೇಶಿಸಲಾಗಿದೆ.

ಇದೀಗ ಕಬಿನಿ ಜಲಾಶಯಕ್ಕೆ 25338 ಕ್ಯೂಸೆಕ್ಸ್ ಒಳಹರಿವು ಇದ್ದು, ನದಿಗೆ 35000 ಕ್ಯೂಸೆಕ್ಸ್

ನೀರು ಬಿಡಲಾಗುತ್ತಿದೆ. ಕೆ.ಆರ್.ಎಸ್ ಜಲಾಶಯದಿಂದ 446 ಕ್ಯೂಸೆಕ್ಸ್ ನೀರನ್ನು ಬಿಡಲಾಗುತ್ತಿದೆ.

ಈ ಹಿನ್ನಲೆಯಲ್ಲಿ ಕೃಷ್ಣರಾಜಸಾಗರ ಮತ್ತು ಕಬಿನಿ ಅಣೆಕಟ್ಟಿಗಳಲ್ಲಿನ ಹೊರ ಹರಿವನ್ನು ರಾಜ್ಯದ ಹಿತಕ್ಕೆ ಮತ್ತು ರಾಜ್ಯವು ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಆದೇಶದ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾವೆಗಳಲ್ಲಿನ ವಾದಗಳಿಗೆ ಧಕ್ಕೆಯಾಗದಂತೆ ನೀರಿನ ಹೊರ ಹರಿವನ್ನು ನಿಯಂತ್ರಿಸಲಾಗುತ್ತಿದೆ. ಜೂನ್ 14ಕ್ಕೆ ಬಿಳಿಗುಂಡ್ಲುವಿನಲ್ಲಿ 5.98 ಟಿಎಂಸಿ ನೀರನ್ನು, ಜುಲೈನಲ್ಲಿ 20 ತಾರೀಖಿನವರೆಗೆ 8.75 ಟಿಎಂಸಿ, ಒಟ್ಟು 14.73 ಟಿಎಂಸಿ ನೀರನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. Actually ಜೂನ್‌ನಲ್ಲಿ 10 ಟಿಎಂಸಿ, ಜುಲೈನಲ್ಲಿ 34 ಟಿಎಂಸಿ ನೀರು ಸೇರಿ ಒಟ್ಟಾರೆ 44 ಟಿಎಂಸಿ ನೀರನ್ನು ನಾವು ಬಿಡುಗಡೆ ಮಾಡಬೇಕಾಗಿತ್ತು. ಆದರೆ ಇಲ್ಲಿಯವರೆಗೆ ಕೇವಲ 14.73 ಟಿಎಂಸಿ ನೀರನ್ನು ಬಿಡುಗಡೆ ಮಾಡುತ್ತಿದ್ದೇವೆ. ಈಗ ಕಬಿನಿಯಲ್ಲಿ ಹೆಚ್ಚು ನೀರು ಬರುತ್ತಿದ್ದರೆ, ಕಬಿನಿಯಿಂದ ನೀರನ್ನು ಬಿಡುತ್ತಿದ್ದೇವೆ. ಕೆ.ಆರ್.ಎಸ್.ನಲ್ಲಿ ಕೇವಲ 446 ಕ್ಯೂಸೆಕ್ಸ್ ನೀರನ್ನು ಸದ್ಯಕ್ಕೆ ಬಿಡುಗಡೆ ಮಾಡುತ್ತಿದ್ದೇವೆ ಎಂದು ನಾನು ಸದನದ ಗಮನಕ್ಕೆ ತರಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಈಗ ಸದನ ಕಲಾಪವನ್ನು ಮುಂದೂಡಿ ಮತ್ತೆ ಮಧ್ಯಾಹ್ನ 3.30ಕ್ಕೆ ಸೇರುವುದು.